ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಮತ್ತು ಆ) ಈ ಯೋಜನೆಗೆ ೧೩೧೦ ಹೆಕ್ಟೇರ್ ಅರಣ್ಯ ಭೂಮಿ ಬಿಡುಗಡೆಯಾಗಬೇಕಾಗಿದ್ದು ಇದರಲ್ಲಿ ೩೪೬ ಬೆಲೆ ಬಾಳುವ ಮರಗಳಿದ್ದು, ಇವುಗಳ ಅಂದಾಜು ಮೌಲ್ಯ ಸುಮಾರು ೧೧.೦೬ ಕೋಟಿ ರೂ. ಆಗುವುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಬೇಕಾಗುವ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ನಿರ್ಧರಿಸಿರುವುದರಿಂದ, ಈ ಕಾಮಗಾರಿಯನ್ನು ಕೈಗೊಳ್ಳಲಂ ಸಾಧ್ಯವಿಲ್ಲ.

ಹರಿಹರದಿಂದ ಕೊಟ್ಟೂರು ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವ ಬಗ್ಗೆ

೧೧೫. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಹರ–ಕೊಟ್ಟೂರು ರೈಲ್ವೆ ಮಾರ್ಗದ ಬೇಡಿಕೆ ಬಹಳ ವರ್ಷಗಳಿಂದ ಇರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರದವರೊಂದಿಗೆ ಸಮಾಲೋಚಿಸಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಸರ್ವೆ ವರದಿಯನ್ನು ಇತ್ತೀಚೆಗೆ ಸಲ್ಲಿಕೆಯಾಗಿದ್ದು, ಸದರಿ ಪ್ರಾಜೆಕ್ಟ್ ಪ್ರತಿಫಲದಾಯಕವಲ್ಲವಾದುದರಿಂದ ಈ ಪ್ರಾಜೆಕ್ಟನ್ನು ಕೈಗೆತ್ತಿಕೊಳ್ಳುವುದನ್ನು ಪರಿಗಣಿಸುವುದು ಕಷ್ಟಕರವೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ. ಈ ಪ್ರಾಜೆಕ್ಟನ್ನು ಸಾಮಾಜಿಕ–ಆರ್ಥಿಕ ದೃಷ್ಟಿಯಲ್ಲಿ ಪರಿಗಣಿಸಬೇಕಾಗುವುದೆಂದೂ, ಹಾಗೂ ಪ್ರತಿಫಲದ ದೃಷ್ಟಿಯಲ್ಲಿ ಪರಿಗಣಿಸಬಾರದೆಂದೂ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಕೋರಿಕೆ ಸಲ್ಲಿಸಿದೆ.

ಹೇಮಾವತಿ ಜಲಾಶಯದ ಕಾಲುವೆಗಳಿಂದ ನೀರಾವರಿ ಆಗುತ್ತಿರುವ ಭೂಮಿ

೧೪೫.(ಬಿ) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಜಲಾಶಯದಿಂದ ಹಾಸನ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನು ಮುಳುಗಡೆಯಾಯಿತು?

ಆ) ಹಾಸನ ತಾಲ್ಲೂಕಿನಲ್ಲಿ ಈ ಜಲಾಶಯದಿಂದ ಎಷ್ಟೆಷ್ಟು ಎಕರೆಗಳಲ್ಲಿ ವೆಟ್‌ಕ್ರಾಪ್ಸ್ ಮತ್ತು ಭತ್ತ, ಕಬ್ಬು ಮುಂತಾದ ನೀರಾವರಿ ಬೆಳೆಗಳನ್ನು ರಾಗಿ, ಜೋಳ, ನೆಲಗಡಲೆ ಮುಂತಾದ ಅರೆ ನೀರಾವರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೩೫೭೦ ಎಕರೆಗಳು.

ಆ) ಹೇಮಾವತಿ ಎಡದಂಡೆ ನಾಲೆಯ ಪೂರ್ಣ ಅಚ್ಚುಕಟ್ಟು ಪ್ರದೇಶದಲ್ಲಿ ಅರೆ ಖುಷ್ಕಿ ಬೆಳೆ ಯೋಜಿಸಲಾಗಿದೆ. ಹಾಸನ ತಾಲ್ಲೂಕಿನಲ್ಲಿ ೮೦೯ ಹೆಕ್ಟೇರು (೨೦೦೦ ಎಕರೆಗಳು) ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.